<u>1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು</u>

**ಸಿಸಿ. ನಂಬರ್ 38/2016**

ಫ್ರಾ.ಸಾಃ 2

ಚಾಸಾಃ 1

**ದಿನಾಂಕಃ01.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

| | |
|---|---|
| ಹೆಸರು | : ಶ್ರೀ ಲಕ್ಷ್ಮೀಚಂದ್ ಬಂಡಾರಿ |
| ತಂದೆಯ ಹೆಸರು | : ಕಪೂರ್ ಚಂದ್ ಬಂಡಾರಿ |
| ವಯಸ್ಸು | : 71 ವರ್ಷ |
| ಕೆಲಸ | : ವ್ಯಾಪಾರ |
| ವಾಸ ಸ್ಥಳ | : ಚನ್ನೈ |

<u>ಭಾ. ದಂ. ಪ್ರ, ಸಂ, ಕಲಂ 299 ಸಿ ಆರ್ ಪಿ ಸಿ ರಡಿಯಲ್ಲಿ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ</u>

ನಾನು 1 ನೇ ಆರೋಪಿಯಿಂದ ಮುಳಬಾಗಿಲಿನ ಚಲ್ಲಂಪಲ್ಲಿ ಗ್ರಾಮದ ಸರ್ವೆ ನಂಬರ್ 3/ಪಿ 13 ರಲ್ಲಿ 4 ಎಕರೆ 38 ಗುಂಟೆ ಆಸ್ತಿಯನ್ನು ದಿಃ 22.07.1999 ರಂದು ಖರೀದಿ ಮಾಡಿರುತ್ತೇನೆ. ದಿಃ 17.01.2008 ರಂದು 1 ನೇ ಆರೋಪಿ ನನ್ನ ಬದಲಿಗೆ ಮತ್ತೊಬ್ಬ ವ್ಯಕ್ತಿ ವಿಜಯ್ ಕುಮಾರ್ ಮಿಸ್ತ್ರಾ ಎಂಬುವವರ ಕೈಯಲ್ಲಿ ಸಹಿ ಮಾಡಿಸಿ ನನ್ನ ಪರವಾಗಿ ಸರ್ವೆ ನಂಬರ್ 3/ಪಿ 13 ರಲ್ಲಿ 4 ಎಕರೆ 38 ಗುಂಟೆ ಆಸ್ತಿಯನ್ನು ಕ್ರಯ ಮಾಡಿರುತ್ತಾರೆ. ನನ್ನ ಸಂಬಂಧಿ ಸುನಿಲ್ ಕುಮಾರ್ ರವರಿಂದ ನನ್ನ ಪರವಾಗಿ ಸರ್ವೆ ನಂಬರ್ 3/ಪಿ 13 ರಲ್ಲಿ 4 ಎಕರೆ 38 ಗುಂಟೆ ಆಸ್ತಿ ಮಾರಾಟ ಆಗಿರುವುದಾಗಿ ತಿಳಿದುಬಂದಿರುತ್ತದೆ. ನಂತರ ನಂಗಲಿ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ ಮತ್ತು ಉಪನೋಂದಣಾಧಿಕಾರಿಗೆ ಆಸ್ತಿಯನ್ನು ಕ್ರಯ ಮಾಡದಂತೆ ತಕರಾರನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ದೂರು ಮತ್ತು ಪಂಚನಾಮೆಯ ಪ್ರತಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ 5 ಮತ್ತು 6 ಎಂದು ಗುರುತಿಸಲಾಯಿತು. ಸಾಕ್ಷಿಗೆ ಎರಡು ಕ್ರಯ ಪತ್ರಗಳ

ಪ್ರತಿಯನ್ನು ತೋರಿಸಲಾಗಿ ಅವುಗಳನ್ನು ಗುರುತಿಸಿದ ಮೇರೆಗೆ ನಿಪಿ 7 ಮತ್ತು 8 ಎಂದು ಗುರುತಿಸಲಾಯಿತು.

ಆರೋಪಿ ತಲೆಮರೆಸಿಕೊಂಡಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸ. ಇದೆ

ಸಹಿ/-

(ಶ್ರೀಮತಿ ರೋಹಿಣಿ. ಡಿ)

1 ನೇ ಅಪರ ಸಿ.ಜೆ ಮತ್ತು ಜೆಎಂಎಫ್ ಸಿ

ಮುಳಬಾಗಿಲು